## STATEMENT BY THE MINISTER OF STATE FOR POWER

*re* : Clarifying his State nent about Sri K.V.Shankare Gowda former Minister holding Chairmanship of some organisations.

ಅಧ್ಯಕ್ಷರು :— ಮುಖ್ಯಮಂತ್ರಿಗಳು ಹೇಳುವುದಾಗಿ ತಿಳಿಸಿದ್ದಾರೆ. ಈಗ ಶ್ರೀಕಂಠಯ್ಯನವರು ಒಂದು ಸ್ಟೇಟ್‌ಮೆಂಟ್ ಮಾಡುವರು.

‡ಶ್ರೀ ಹೆಚ್. ಸಿ. ಶ್ರೀಕಂಠಯ್ಯ ( ವಿದ್ಯುಚ್ಛಕ್ತಿ ಶಾಖೆಯ ರಾಜ್ಯ ಮಂತ್ರಿಗಳು) : ಸನ್ಮಾನ್ಯ ಸಭಾಧ್ಯಕ್ಷಣಿಯರೇ, ತಾರೀಖು 12-2-1975ರ ದಿವಸ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ನಾನು ಮಂತ್ರಿಯಾದಮೇಲೆ ಕೆಲವು ಸಂಘ ಸಂಸ್ಥೆಗಳಲ್ಲಿ ಕೆಲಸಮಾಡುವ ಔಚಿತ್ಯವನ್ನು ಪ್ರಶ್ನಿಸಿ ನನ್ನ ವಿವರಣೆಯನ್ನು ಬಯಸಿದ್ದರು. ಆ ಸಂದರ್ಭದಲ್ಲಿ ನಾನು ವಿವರಣೆಯನ್ನು ಕೊಡುತ್ತಾ ಪ್ರಾಸಂಗಿಕವಾಗಿ ಶಂಕರೇಗೌಡರು ಮತ್ತು ನಾಡಗೌಡರು ಇವರ ಹೆಸರುಗಳನ್ನು ಉದಹರಿಸಿರುವುದು ತಮಗೆ ಗೊತ್ತಿದೆ. ಆದಾದಮೇಲೆ ಶಂಕರೇಗೌಡರು ತಮ್ಮ ಮೂಲಕ ನನಗೆ ಒಂದು ಪತ್ರವನ್ನು ಬರೆದು ವಿಚಾರ ತಿಳಿಸಿದರು, ತಮ್ಮಿಂದ ಸಹ 19-2-1975ರಲ್ಲಿ ಪತ್ರ ಬಂತು. ಶಂಕರೇಗೌಡರು ಮಂತ್ರಿಗಳಾದಮೇಲೆ ಇತರ ಸಂಸ್ಥೆಗಳಿಗೆ ರಾಜೀನಾಮೆ ಕೊಟ್ಟಿದ್ದಾರೆ. ಶ್ರೀಕಂಠಯ್ಯನವರು ನನ್ನ ಹೆಸರನ್ನು ತಾನನ ಸಭೆಯಲ್ಲಿ ಉದಾಹರಣೆಗಾಗಿ ಹೇಳಿದ್ದಾರೆ, ನಾನು ರಾಜೀನಾಮೆಯನ್ನು ಇತರ ಸಂಸ್ಥೆಗಳಿಗೆ ಮಂತ್ರಿಯಾದಮೇಲೆ ಕೊಟ್ಟಿದ್ದೇನೆ ಎಂದು ಪತ್ರ ಮೂಲಕ ನನಗೆ ತಿಳಿಸಿದ್ದಾರೆ. ನನಗಾದರೂ ಶಂಕರೇಗೌಡರ ಬಗ್ಗೆ ಹೆಚ್ಚು ಗೌರವವಿದೆ. ಅವರ ವ್ಯಕ್ತಿತ್ವಕ್ಕೆ ಯಾವರೀತಿಯಲ್ಲೂ ಭಂಗತರಲು ಅವರ ಹೆಸರನ್ನು ನಾನು ಉಪಯೋಗ ಮಾಡಿಲ್ಲ, ಅವತ್ತು ನನಗೆ ತಿಳಿದುಬಂದಂತೆ ಅವರ ಹೆಸರನ್ನು ಹೇಳಿದೆ, ಅವರಿಂದ ಪತ್ರ ಬಂದಮೇಲೆ ನಿಜವಾದ ಅಂಶ ಗೊತ್ತಾಯಿತು. ಅದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸುತ್ತೇನೆ.

## Deaforestation at Sorab Taluk

ಶ್ರೀ ಎಸ್. ಬಂಗಾರಪ್ಪ :—ನಿನ್ನೆ ನಾನು ಮತ್ತು ಕಾಗೋಡು ತಿಮ್ಮಪ್ಪ ನವರು ಒಂದು ವಿಷಯವನ್ನು ಪ್ರಸ್ತಾಪಿಸಿದ್ದೆವು. ಸೊರಬ ತಾಲ್ಲೂಕಿನ ಕೂಡಗಣಿ ಮತ್ತು ಜಕ್ಕೂರು ಈ ಗ್ರಾಮಗಳ ಸುತ್ತಮುತ್ತ ಇರುವ ಸಾವಿರಾರು ಎಕರೆ ಅರಣ್ಯ ಪ್ರದೇಶ ರೆವೆನ್ಯೂ ನಲ್ಲಿದೆ. ಅಲ್ಲಿ ಗಿಡಗಳನ್ನು ಕಡಿಯುತ್ತಿದ್ದಾರೆ. ಇದರ ಬಗ್ಗೆ ರೂಲ್ 312ರ ಕೆಳಗೆ ಸೂಚನೆ ಕಳಿಸಿತು

ಅಧ್ಯಕ್ಷರು : ಅದನ್ನು ಕಾಲ್ ಅಟೆನ್‌ಷನ್ ಆಗಿ ಪರಿವರ್ತನೆ ಮಾಡಿದ್ದೇನೆ. ಉತ್ತರ ಬಂದ ತಕ್ಷಣ ಅದನ್ನು ತೆಗೆದು ಕೊಳ್ಳುತ್ತೇನೆ.

## Murder of a harijan in Shimoga

SRI S. M. Sheernali Chandrashekhar :— In my constituency in Shimoga there is a murder of harijan. I have tabled a call attention motion; so far, I have not received any attention.

ಅಧ್ಯಕ್ಷರು :—ತಾವು ನಿನ್ನೆಮೊನ್ನೆ ಚುನಾಯಿತರಾಗಿ ಬಂದಿಲ್ಲ, ಮೂರೂವರೆ ವರ್ಷವಾಗಿದೆ. ರೂಲ್ಸ್ ಓದಿಕೊಳ್ಳಬೇಕು. ಒಂದು ದಿನಕ್ಕೆ ರೂಲ್ಸ್ ಪ್ರಕಾರ ಒಂದು ಕಾಲ್ ಅಟೆನ್‌ಷನ್ ಹಾಕಬೇಕು. ಆದರೆ ಸದಸ್ಯರಿಗೆ ಮತ್ತು ಸರ್ಕಾರಕ್ಕೆ ಅನುಕೂಲವಾಗಲೆಂದು 3-4 ಹಾಕುತ್ತಿದ್ದೇನೆ. ತಾವು ನನ್ನ ಛೇಂಬರ್‌ಗೆ ಬಂದು ವಿಚಾರ ತಿಳಿದುಕೊಳ್ಳಬೇಕು. The Hon. Member says. He has not received attention. What is the special attention he needs.

ಶ್ರೀ ಎಸ್. ಬಂಗಾರಪ್ಪ :—ನಿನ್ನೆ ಪ್ರಸ್ತಾಪಮಾಡಿದಾಗ ಈ ದಿವನ ತೆಗೆದು ಕೊಳ್ಳಬಹುದು ಎಂಬ ಅಭಿಪ್ರಾಯ ಬಂದು ಈ ದಿನ ಪ್ರಸ್ತಾಪಮಾಡಿದೆವು. ನಿನ್ನೆ ನಾಷ ಕಡಿಯುವುದಕ್ಕೆ ಹೋಗಿ ಗಲಾಟೆಯಾಗಿದೆ.

ಅಧ್ಯಕ್ಷರು:--ನಾನು 12 ಗಂಟೆಗೆ ಬರುತ್ತೇನೆ, ಆಗ ಬಂದು ಹೇಳಬಹುದು

ಶ್ರೀ ಜಿ. ಪುಟ್ಟಸ್ವಾಮಯ್ಯ :—ಇದನ್ನು ತೀವ್ರವಾಗಿ ಗಮನಿಸಬೇಕು. ನಮಗೆ ಟೀಕೆ ಮಾಡುವುದೇ ಕಸಬಲ್ಲ ಮಂತ್ರಿಗಳ ಅವಿವೇಕ ವರ್ತನೆಯಿಂದ ಟೀಕೆ ಮಾಡಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್ :—ಸಂಬಂಧಪಟ್ಟವರು ಆ ಮನೆಯಲ್ಲಿದ್ದಾರೆ. ಹೇಳಿ ಕಳಿಸುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ : ನಾನು ರೂಲ್ 312ರ ಕೆಳಗೆ ಒಂದು ಸೂಚನೆ ಕಳುಹಿಸಿದ್ದೇನೆ. ಕೊಬರಿ ಬೆಲೆ ತೀವ್ರವಾಗಿ ಕುಸಿದಿದೆ, ಮುಖ್ಯ ಮಂತ್ರಿಗಳಿದ್ದಾರೆ. ಇಂದು ಒಂದು ಗಂಟೆ ಸೂಚನೆ ಕಳಿಸಿದೆ. ಇದು ಜನತಾ ಪ್ರಶ್ನೆ.